ಇಲಾಖೆ / ವಿಷಯ: DEPARTMENT / SUBJECT: ಕ್ರೀಡೆ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ ದಿನಾಂಕ : DATE : 10/05/2019

# ರಾಜ್ಯ ಈಜು ಸಂಸ್ಥೆ ಅಧ್ಯಕ್ಷ ನೀಲಕಂಠ ಜಗದಾಳೆ ನಿಧನ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರ್ನಾಟಕ ರಾಜ್ಯ ಈಜು ಸಂಸ್ಥೆ ಅಧ್ಯಕ್ಷ ನೀಲಕಂಠ ರಾವ್ ಜಗದಾಳೆ (67) ಗುರುವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಅವರು ಹಲವು ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ದೇಶದ ಪ್ರತಿಷ್ಠಿತ ಈಜು ಕ್ಲಬ್ ಬಸವನಗುಡಿ ಈಜು ಕೇಂದ್ರದ (ಬಿಸಿಎ) ಸಂಸ್ಥಾಪಕ ಸದಸ್ಯರೂ ಆಗಿದ್ದ ನೀಲಕಂಠ ರಾವ್ ಜಗದಾಳೆ, ಸತತ 27 ವರ್ಷಗಳ ಕಾಲ ಕರ್ನಾಟಕ ಈಜು ಸಂಸ್ಥೆ (ಕೆಎಸ್‌ಎ) ಅಧ್ಯಕ್ಷರಾಗಿದ್ದರು. ಉತ್ತಮ ಕ್ರೀಡಾ ಆಡಳಿತಗಾರ ಎನಿಸಿಕೊಂಡಿದ್ದ ಜಗದಾಳೆ ಹಲವು ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳು ಲಭಿಸಿದ್ದವು. 1989ರಲ್ಲಿ ಕೆಎಸ್‌ಎ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಅವರು ಬಸವನಗುಡಿ ಈಜು ಕೇಂದ್ರದಲ್ಲಿ ಹಲವು ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಆಯೋಜಿಸಲು ಪ್ರಮುಖ ಪಾತ್ರವಹಿಸಿದ್ದರು. ಜತೆಗೆ ಇಡೀ ದೇಶದಲ್ಲೇ ಕರ್ನಾಟಕ ಈಜಿನಲ್ಲಿ ನಂ.1 ಸ್ಥಾನ ಪಡೆಯಲು ಜಗದಾಳೆ ಶ್ರಮ ಸಾಕಷ್ಟಿದೆ. ಕರ್ನಾಟಕ ರಾಜ್ಯ ಒಲಿಂಪಿಕ್ ಸಂಸ್ಥೆಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ, ಸಚಿವ ಆರ್.ವಿ. ದೇಶಪಾಂಡೆ, ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಸೇರಿ ಹಲವು ಹಾಲಿ ಹಾಗೂ ಮಾಜಿ ಈಜು ಪಟುಗಳು, ತರಬೇತುದಾರರು ಅಂತಿಮ ದರ್ಶನ ಪಡೆದರು. ಮೃತರು ಪತ್ನಿ ಸುರೇಖಾ, ಮಗ ರಕ್ಷಿತ್ ಹಾಗೂ ಮಗಳು ಗೀತಾ ಅವರನ್ನು ಅಗಲಿದ್ದಾರೆ. ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.